ಶ್ರೀ ಡಿ. ಟಿ. ಸೀತಾರಾಮರಾವ್.—ಷೇರು ಬಂಡವಾಳದ ಎಷ್ಟರಷ್ಟು ಹಣಕೊಡಬೇಕೆಂದು ನಿಯಮವಿದೆ. 100 ರೂಪಾಯಿ ಷೇರು ಬಂಡವಾಳವಿದ್ದರೆ ಅದಕ್ಕೆ 21ರಷ್ಟು ಹಣ collect ಮಾಡಿಕೊಡುತ್ತೀರಿ ಎಂದರೆ ಷೇರು ಹಣದ 20ರಷ್ಟು ಕೊಡುತ್ತಾರೆಂದು ಅರ್ಥವೇ ?

Sri MOHAMED ALI.—That has been fixed up according to the bye-laws. The borrowing capacity is based on the share capital paid by the members and that has been determined by the bye-laws of the society.

ಶ್ರೀ ಡಿ. ಟಿ. ಸೀತಾರಾಮರಾವ್—ಈಗ 4 ವರ್ಷ ಶಿವಮೊಗ್ಗ ಜಿಲ್ಲೆಯಲ್ಲಿ Superintendent of Rural Industries ಮತ್ತು ಕೋ-ಆಪರೇಟಿವ್ ಸೊಸೈಟಿ ಇನ್ಸ್‌ಪೆಕ್ಟರುಗಳ ಸಂಬಳ ಸಾರಿಗೆಗೆ 3 ಲಕ್ಷ ರೂಪಾಯಿ ಸಾಂಕ್ಷನ್ ಆಗಿದ್ದರೂ 4 ಲಕ್ಷ ರೂಪಾಯಿ ಗಳಷ್ಟು ಖರ್ಚು ಬಿದ್ದಿದೆಯೆಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

Sri MOHAMED ALI.—So far as old Mysore is concerned, there were no district officers of the department as also field staff. Under the R.I. scheme, we have posted some officers and they are looking not only R.I. schemes but are also implementing the schemes of the Government of India. It is difficult to say how much has been spent for implementing the R.I. scheme.

Sri A. R. BADRI NARAYAN.—It is stated that a sum of Rs. 2,19,654 has been given as loans. May I know the progress made in these industries ?

Sri MOHAMED ALI.—These loans have been given to individuals and most of them are agriculturists. It is somewhat difficult to assess the results because under the R.I. scheme, loans have been granted for agriculture and allied industries.

Sri J. B. MALLARADHYA.—What is the agency employed by the Government to assess the progress of any industry ?

Sri MOHAMED ALI.—There is no special agency.

Sri J. B. MALLARADHYA.—Then, how do Government assure themselves that the money allotted has been properly utilised ?

Sri MOHAMED ALI.—Very recently we have appointed a Statistician and he is drawing up a *pro forma* to assess results achieved in these enterprises.

ಶ್ರೀ ಕೆ. ಎಲ್. ನರಸಿಂಹಯ್ಯ.—ಇದರಲ್ಲಿ ಪಂಚಾಯಿತಿಯಿಂದ ಹಾಕಿರತಕ್ಕ ದುಡ್ಡು ಎಷ್ಟಿದೆ ?

Sri MOHAMED ALI.—I am not in a position to give that information.

ಶ್ರೀ ಕೆ. ಎಲ್. ನರಸಿಂಹಯ್ಯ.—ಈ cut motion ಬರುತ್ತದೆಂದು ಹೇಳಿ ರೆವಿನ್ಯೂ ಇನ್‌ಸ್ಪೆಕ್ಟರು ಎಲ್ಲ ಹಳ್ಳಿಗೂ ಹೋಗಿ ಬೇರೆ ಪಂಚಾಯಿತಿ ಕೆಲಸಕ್ಕೆ ದುಡ್ಡು ಕೊಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri MOHAMED ALI.—It has not come to the notice of the Government.

Sri F. H. MOHSIN.—Has the scheme been extended to the integrated areas also ?

Mr. SPEAKER.—That question does not arise.

Sri A. R. BADRI NARAYAN.—What is the purpose for which the loans are given to agriculturists ?

Sri MOHAMED ALI.—It is difficult to understand ther question. The R.I. scheme was meant not only to assist the industries but also for the gainful occupations of agriculturists. Therefore the loans were advanced to agriculturists for gardening and other purposes.

Sri J. B. MALLARADHYA.—Is it possible for the Hon'ble Minister to state at least six of the more important industries of the Malnad area for which encouragement has been given by way of loan including the sandal wood and ivory-carving industries.

Sri MOHAMED ALI.—So far as the Sandal wood industry is concerned, a co-operative society has been given financial assistance and so far as the wood-carving industry is concerned. the question of rendering financial assistance has been taken up. I am not in a position to give those details just now.

Recovery of Arrears from Persons supplied with Tractors and Bull-Dozers.

Q.—384. Sri G. N. PUTTANNA (Tumkur).—

Will the Government be pleased to state :—

(*a*) the number of persons who were supplied with Government tractors and bull-dozers on hire and also on hire-purchase system since three years for their private work in old Mysore State;

(*b*) whether any amount is still due to Government from them in

respect of hire and hire-purchase charges in the form of arrears;

(*c*) if so, the number of persons who are still to pay arrears;

(*d*) the action taken to recover the amount?

A.—Sri H. S. RUDRAPPA (Minister for Agriculture).—

(*a*) 1,652;

(*b*) Yes.

(*c*) 118.

(*d*) The parties are being pressed to settle the arrears expeditiously and the authorities of the Revenue Department are being addressed to take coercive measures to collect the arrears wherever such action is considered necessary.

ಶ್ರೀ ಜಿ. ಎಸ್. ಪುಟ್ಟಣ್ಣ.—ನಪ್ಲಿಮೆಂಟರಿ ಹಾಕುವುದಕ್ಕೆ ಮುಂಚೆ ಒಂದು ವಿಷಯ ಕೇಳುತ್ತೇನೆ. ಹತ್ತು ವರ್ಷ ಎಂದು ಕೇಳಿದ್ದಕ್ಕೆ ಮೂರು ವರ್ಷಕ್ಕೆ ಮಾತ್ರ ಕೊಟ್ಟಿದ್ದೀರಿ.

ಅಧ್ಯಕ್ಷರು.—ಅದು ಅವರ ತಪ್ಪಲ್ಲ. ನೀವು ಹತ್ತು ವರ್ಷಕ್ಕೆ ಕೇಳಿದ್ದನ್ನು ನಾವು ಮೂರು ವರ್ಷಕ್ಕೆ ಇಳಿಸಿದ್ದೇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ 1,652 ಏನ್ನುವುದು ಎಷ್ಟು ವರ್ಷದ ಅವಧಿಯಲ್ಲಿ ಕೊಟ್ಟಿದ್ದು?

ಶ್ರೀ ಎಚ್. ಎಸ್. ರುದ್ರಪ್ಪ.—ಮೂರು ವರ್ಷದ್ದು.

ಶ್ರೀ ಜಿ. ಎಸ್. ಪುಟ್ಟಣ್ಣ.—ಹತ್ತು ವರ್ಷಕ್ಕೆ ಎಷ್ಟಾಗುತ್ತದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಆಗುವುದಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—(ಬ)ಗೆ ಉತ್ತರವಾಗಿ 'yes' ಎಂದು ಹೇಳಿದ್ದೀರಿ. ಬಾಕಿ ಎಷ್ಟಿದೆ ಎಂಬುದನ್ನು ಹೇಳಬಲ್ಲಿರಾ?

ಶ್ರೀ ಎಚ್. ಎಸ್. ರುದ್ರಪ್ಪ.—4,350 ರೂಪಾಯಿ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ಟ್ರ್ಯಾಕ್ಟರ್‌ಗಳನ್ನು ಹೈರ್‌ಪರ್ಚೇಸ್‌ಗೆ ಕೊಟ್ಟದ್ದೆ ಅಥವಾ ಉಳುವುದಕ್ಕೆ ಕೊಟ್ಟದ್ದೇ?

ಶ್ರೀ ಎಚ್. ಎಸ್. ರುದ್ರಪ್ಪ.—ಉಳುವುದಕ್ಕೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಯಾರು ಯಾರಿಂದ ಎಷ್ಟೆಷ್ಟು ಬರಬೇಕು ಎನ್ನುವ ವಿವರ ಕೊಡುವುದಕ್ಕೆ ಸಾಧ್ಯವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಹೆಸರು ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಟ್ರ್ಯಾಕ್ಟರ್ ಕೊಟ್ಟು ಉಳುಮೆ ಆದ ತಕ್ಷಣ ಹಣ ವಸೂಲು ಮಾಡಬೇಕೆಂದು ಆರ್ಡರ್ ಇರುವಾಗ 118 ಜನರಿಂದ ಬರಬೇಕಾದ ಹಣ ಬಿಟ್ಟಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಎಸ್. ರುದ್ರಪ್ಪ.—ನಾವು ವಸೂಲು ಮಾಡಬೇಕಾದರೆ ಕೊಡುವುದಿಲ್ಲ. ವಸೂಲು ಆಗದಿದ್ದರೆ ರೆವಿನ್ಯೂ ಅಥಾರಿಟೀಸ್ ಕಳುಹಿಸಿ ಆಮೇಲೆ ವಸೂಲು ಮಾಡಬೇಕೆಂದು ಹೇಳುತ್ತೇವೆ. ವಸೂಲಾಗುತ್ತಾ ಇದೆ. ಇನ್ನೂ ವಸೂಲು ಮಾಡಬೇಕೆಂದು ತಿಳಿಸಿದ್ದೇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಇದರಲ್ಲಿ ರೈಟ್ ಆಫ್ ಆಗಿರುವುದು ಎಷ್ಟು?

ಶ್ರೀ ಎಚ್. ಎಸ್. ರುದ್ರಪ್ಪ.—ರೈಟ್ ಆಫ್ ಆಗಿಲ್ಲ.

ಶ್ರೀ ಬಿ. ಇ. ರಾಮಯ್ಯ.—118 ಜನ ಇನ್ನೂ ಹಣ ಕೊಡಬೇಕೆಂದು ಹೇಳಿದ್ದೀರಿ. ಸರ್ಕಾರದಲ್ಲಿ ಎಷ್ಟೋ ಜನ ಹಣ ಡಿಪಾಸಿಟ್‌ನಲ್ಲಿ ಇಟ್ಟಿದ್ದರೂ ಕೂಡ ಅವರಿಗೆ ಟ್ರ್ಯಾಕ್ಟರ್ಸ್ ಕೊಟ್ಟಿಲ್ಲ ಎಂಬುದು ಗೊತ್ತೇ?

ಶ್ರೀ ಎಚ್. ಎಸ್. ರುದ್ರಪ್ಪ.—ಕೆಲವರು ಹಣ ಕೊಟ್ಟಿದ್ದಾರೆ, ಕೊಟ್ಟಿದ್ದರೂ ಒಡಗಿಸಿಲ್ಲ ಎಂದು ಹೇಳಿದರು. ಏಕೆಂದರೆ ಒಬ್ಬೊಬ್ಬರಿಗೋಸ್ಕರ ಟ್ರ್ಯಾಕ್ಟರ್ ತೆಗೆದುಕೊಂಡು ಹೋಗಿ ಹೊಡೆಯುವುದಕ್ಕೆ ಕಷ್ಟವಾಗುತ್ತದೆ. ಅಂಥ ಕೆಲವು ಕಡೆ ಕೊಟ್ಟಿಲ್ಲ. ಕೆಲವು ಕಡೆ ಒದಗಿಸುವುದಕ್ಕೆ ಸಾಧ್ಯವಾಗದೇ ಕೊಟ್ಟಿಲ್ಲ.

ಶ್ರೀ ಬಿ. ಇ. ರಾಮಯ್ಯ.—ಬಳ್ಳಾರಿ ಜಿಲ್ಲೆಯವರು ಹಣ ಡಿಪಾಸಿಟ್ ಕಟ್ಟುತ್ತೇವೆ ಎಂದು ಯಾರಾದರೂ ಮುಂದೆ ಬಂದಿದ್ದಾರೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ನನಗೆ ಗೊತ್ತಿಲ್ಲ. ಬಳ್ಳಾರಿ ಡಿಸ್ಟ್ರಿಕ್ಟ್‌ಗೂ ಕೊಟ್ಟಿದ್ದೇವೆ. ಈಗ ಜಮೀನನ್ನು ಸಾಗು ಆಗುತ್ತಾ ಇದೆ. ಬಾಕಿ ಕೂಡ ಕೆಲವು ವಸೂಲು ಆಗುವುದು ಇದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಮೊದಲು ದುಡ್ಡು ಕೊಟ್ಟವರಿಗೆ ಬುಲ್‌ಡೋಜರ್ಸ್ ಮತ್ತು ಟ್ರ್ಯಾಕ್ಟರ್ಸ್ ಕೊಡಬೇಕೆಂದು ಸರ್ಕಾರದ ಆರ್ಡರ್‌ನಲ್ಲಿ ಇಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಆ ರೀತಿ ಇನ್‌ಸ್ಟ್ರಕ್ಷನ್ ಇದೆ. ಹತ್ತು ಏಕರೆ ಹೊಡೆಯುವುದಕ್ಕೆ ಕೇಳಿ 12 ಏಕರೆ ಹೊಡೆಸುತ್ತಾರೆ, ಮತ್ತು ಅದರ ಪಕ್ಕದಲ್ಲೇ ಇರುವ ಜಮೀನನ್ನೂ ಹೊಡೆದು ಕೊಡಿ ಎಂದು ಕೇಳುತ್ತಾರೆ. ವ್ಯವಸಾಯಕ್ಕೆ ಸಂಬಂಧಪಟ್ಟದ್ದು ಇದು. ಆದ್ದರಿಂದ ಅಷ್ಟು ಬಿಗಿಯಾಗಿ ರೂಲ್ಸ್ ಮಾಡಿದರೆ ಕಷ್ಟವಾಗುತ್ತದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಅಸೆಂಬ್ಲಿ ಮೆಂಬರ್ಸ್‌ನಿಂದ, ಯಾರದಾದರೂ ಬಾಕಿ ನಿಂತಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಅದನ್ನು ಈಗ ಹೇಳಲಿಕ್ಕೆ ಆಗುವುದಿಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಆ ವರದಿಯನ್ನು ತರಿಸುತ್ತೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ಹೆಸರನ್ನು ಕೊಡಕೂಡದೆಂದು ಅಧ್ಯಕ್ಷರು ಆಗಲೇ ಹೇಳಿದ್ದಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಅಸೆಂಬ್ಲಿ ಸದಸ್ಯರು ಬಾಕಿದಾರರು ಇದ್ದರೆ ಅದು ಮಹತ್ವದ ವಿಷಯ. ಅಂತಹವರ ಪಟ್ಟಿಯನ್ನು ಅಸೆಂಬ್ಲಿ ಮುಂದೆ ಇಡುತ್ತೀರಾ?

ಅಧ್ಯಕ್ಷರು.—ಅದನ್ನು ಇಡಲಿಕ್ಕೆ ಬರುವುದಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಅಸೆಂಬ್ಲಿ ಸದಸ್ಯರಿಂದ ಇಷ್ಟು ಬಾಕಿ ಇದೆ ಎಂದು ಹೇಳಿ ಹಾಗೆ ಇಡಲಿಕ್ಕೆ ಮಂತ್ರಿಗಳು ಒಪ್ಪುತ್ತಾರೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಅಸೆಂಬ್ಲಿ ಮೆಂಬರ್ಸ್ ಇಂದು ಇಷ್ಟು ಹಣ ಬರಬೇಕೆಂಬುದನ್ನು ಹೇಳುತ್ತೇನೆ. ಹೆಸರು ಹೇಳಲಿಕ್ಕೆ ಆಗುವುದಿಲ್ಲ. ಅದೂ ಕೂಡ ನಮ್ಮಲ್ಲಿದೆಯೋ ಇಲ್ಲವೋ ಪರೀಕ್ಷೆ ಮಾಡಬೇಕು.

ಶ್ರೀ ಎ. ಜೆ. ದೊಡ್ಡಮೇಟಿ.—ಪರೀಕ್ಷೆ ಮಾಡಿ ಆದ ನಂತರ?

ಶ್ರೀ ಎಚ್. ಎಸ್. ರುದ್ರಪ್ಪ.—ಇಡುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈ 1,652 ಜನಕ್ಕೆ ಹೈರ್‌ಮೇಲೆ ಕೊಟ್ಟಿರುವುದೇ? ಹೈರ್ ಪರ್ಚೇಸ್ ಮೇಲೆ ಕೊಟ್ಟಿರುವುದೇ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲಿ ಹೇಳಿರುವುದು ಹೈರ್ ಪರ್ಚೇಸ್ ಎಂದು. ಆದರೆ ಹೈರ್ ಮೇಲೆ ಕೊಟ್ಟಿರುವುದು.

Sri C. K. RAJAIAH SETTY.—May I know the number of persons to whom Government have sold tractors on the hire-purchase system ?

Sri H. S. RUDRAPPA.—During the last 3 years the Government have sold tractors to two persons on hire purchase system.

ಶ್ರೀ ಕೆ. ಸಿ. ರೇವಣ್ಣಸಿದ್ದಪ್ಪ.—ಸಾಮಾನ್ಯವಾಗಿ ದೊಡ್ಡ ದೊಡ್ಡ ಜಮೀನ್‌ದಾರರು, ಅನುಕೂಲಸ್ಥರೇ ಆಲ್ಲವೇ ಈ ಟ್ರ್ಯಾಕ್ಟರುಗಳನ್ನು ಉಪಯೋಗಿಸುತ್ತಾ ಇರುವವರು ?

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗೆ ಹೇಳಲಕ್ಕೆ ಆಗುವುದಿಲ್ಲ. ಸ್ವಲ್ಪ ಹೆಚ್ಚು ಜನ ಆ ರೀತಿ ಇರಬಹುದು. ಬಡವರೂ, ಸಣ್ಣ ಸಣ್ಣ ಜಮೀನ್‌ದಾರರೂ ಉಪಯೋಗಿಸಿದ್ದಾರೆ ಎಂದು ನಮಗೆ ಗೊತ್ತಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಣ ನಿಂತಿರುವುದು ಅನುಕೂಲಸ್ಥರದೇ ಅಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗೆ ಎಂದು ನನ್ನಲ್ಲಿ ರೆಕಾರ್ಡ್ ಇಲ್ಲ. ಇದನ್ನು ತಿಳಿದುಕೊಳ್ಳಬೇಕು. ಅನುಕೂಲಸ್ಥರದು ಇದ್ದರೆ ಇನ್ನೂ ಉತ್ತಮವೇ ಆಯಿತು. ಹಣ ಜಾಗ್ರತೆ ಬರುತ್ತದೆ.

		1954–55 Rs. nP.
ಮೈಸೂರು	...	ಏನೂ ಇಲ್ಲ
ಕೋಲಾರ	...	ಏನೂ ಇಲ್ಲ
ಚಿತ್ರದುರ್ಗ	...	ಏನೂ ಇಲ್ಲ
ಬಳ್ಳಾರಿ	...	102 ...
ತುಮಕೂರು	...	31 19
ಚಿಕ್ಕಮಗಳೂರು	...	25 ...
ಹಾಸನ	...	126 50
ಶಿವಮೊಗ್ಗ	...	265 25
ಬೆಂಗಳೂರು	...	171 50
ಮಂಡ್ಯ	...	385 50

ಶ್ರೀ ಜಿ. ಎನ್. ಪುಟ್ಟಣ್ಣ.—ಬುಲ್ ಡೋಜರ್ಸ್, ಟ್ರ್ಯಾಕ್ಟರುಗಳಿಗೆ ಡೀಜೆರ್ ಎಣ್ಣೆಯನ್ನು ಡಿಪಾರ್ಟ್‌ಮೆಂಟಿನವರು ನಪ್ಲೈ ಮಾಡುತ್ತಾರೋ ಅಥವಾ ಪ್ರೈವೇಟ್ ಆಗಿ ತೆಗೆದುಕೊಳ್ಳಬೇಕಾಗುತ್ತದೆಯೋ ?

ಶ್ರೀ ಎಚ್. ಎಸ್. ರುದ್ರಪ್ಪ.—ಡಿಪಾರ್ಟ್‌ಮೆಂಟ್ ನವರು ನಪ್ಲೈಮಾಡುತ್ತಾರೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಡೀಜೆರ್ ಆಯಿಲ್ ತಂದು machine out of order ಆಗಿದೆ ಎಂದು ಹೇಳಿ ಸರ್ಕಾರಕ್ಕೆ ದ್ರೋಹ ಮಾಡುತ್ತಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಬಂದಿಲ್ಲ. ಹಾಗೆ ಏನಾದರೂ ಇದ್ದರೆ ತನಿಖೆ ಮಾಡುತ್ತೇವೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—(ಬ) ಪ್ರಶ್ನೆಗೆ 'yes' ಎಂದು ಹೇಳಿದ್ದೀರಿ. ಎಷ್ಟು ಬಾಕಿ ಇದೆ ಎಂಬುದನ್ನು ಹೇಳಬಲ್ಲಿರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಆಗಲೇ ತಿಳಿಸಿದೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಹತ್ತು ವರ್ಷಗಳಿಂದ ಬಾಕಿ ನಿಂತಿರುವುದು ಎಷ್ಟು ? 45 ವರ್ಷಗಳಿಂದ ಬಾಕಿ ನಿಂತಿರುವುದು ಎಷ್ಟು ?

ಶ್ರೀ ಎಚ್. ಎಸ್. ರುದ್ರಪ್ಪ.—ಹತ್ತು ವರ್ಷದ್ದು ಹೇಳಲಕ್ಕೆ ಆಗುವುದಿಲ್ಲ. ಮೂರು ವರ್ಷದ್ದು ಕೇಳಿದ್ದಾರೆ. 4,350 ರೂಪಾಯಿ ಬಾಕಿ ಇದೆ ಎಂದು ಹೇಳಿದ್ದೇನೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಇದರಲ್ಲಿ ರೆಮಿಷ್ಷನ್ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ಹೇಳಬಲ್ಲಿರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಮೂರು ವರ್ಷಗಳಲ್ಲಿ ರೆಮಿಷ್ಷನ್ ಕೊಟ್ಟಿಲ್ಲ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಅದಕ್ಕೆ ಹಿಂದೆ ಬರಬೇಕಾಗಿದ್ದ ಬಾಕಿಯಲ್ಲಿ ಎಷ್ಟು ರೆಮಿಷ್ಷನ್ ಮಾಡಿದ್ದೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಬೇರೆ ಪ್ರಶ್ನೆ ಹಾಕಿದರೆ ತಿಳಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ 118 ಜನರಿಂದ ಬರಬೇಕಾದ ಬಾಕಿ ಯಾವ ಯಾವ ಡಿಸ್ಟ್ರಿಕ್ಟಿನಲ್ಲಿ ಎಷ್ಟೆಷ್ಟು ?

ಶ್ರೀ ಎಚ್. ಎಸ್. ರುದ್ರಪ್ಪ.—ಬಾಕಿ ಒಟ್ಟು ಇರುವುದು ಕೇಳಿದ್ದೀರಿ. ಡಿಸ್ಟ್ರಿಕ್ಟಿನದು ಒಂದಿ ಹೇಳುತ್ತೇನೆ.

1955–56 Rs. nP.	1956-57 Rs. nP.
461 ...	406 25
435 25	365 75
ಏನೂ ಇಲ್ಲ	ಏನೂ ಇಲ್ಲ
ಏನೂ ಇಲ್ಲ	33 ...
ಏನೂ ಇಲ್ಲ	5 ...
ಏನೂ ಇಲ್ಲ	ಏನೂ ಇಲ್ಲ
166 50	149 50
68 19	115 25
ಏನೂ ಇಲ್ಲ	9 ...
750 ...	633 50

Inconvenience caused to Marathi Speaking Employees as a result of adopting Kannada as Official Language in Belgaum District.

Q.—678. Sri N. O. SAMAJI (Belgaum II).—

Will the Government be pleased to state:—

(a) whether they are aware of the inconvenience caused to Marathi speaking employees in Belgaum District as a result of adopting Kannada language for official purposes in the various Departments;